# ಸಿನಿಮಾ ತಯಾರಿಕೆಯಲ್ಲಿ ಒಂದು ವಾರದ ಕಾರ್ಯಾಗಾರ

ಕಾವ ಕಾಲೇಜಿನ ಛಾಯಾಚಿತ್ರ ಮತ್ತು ಛಾಯಾಚಿತ್ರ ಪತ್ರಿಕೋದ್ಯಮ ವಿಭಾಗದಲ್ಲಿ 20-11-23 ರಿಂದ 25-11-23 ವರೆಗೆ ಛಾಯಾಚಿತ್ರ ಮತ್ತು ಸಿನಿಮಾ ತಯಾರಿಕೆಯ ಬಗ್ಗೆ ಒಂದು ವಾರದ ನಡೆಯಿತು.



ಕಾರ್ಯಾಗಾರದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಸಿನಿಮಾ ಟಾಗ್ರಾಫರ್ ನಿರೀಕ್ಷಿತ್ ಅವರು ಸಿನಿಮಾ ತಯಾರಿಕೆಯ ವಿವಿಧ ಹಂತಗಳಾದ ಪ್ರಿಪ್ರೊಡಕ್ಷನ್ ಪ್ರೊಡಕ್ಷನ್ ಅಂಡ್ ಪೋಸ್ಟ ಪ್ರೊಡಕ್ಷನ್ ಬಗ್ಗೆ ಪ್ರಾಯೋಗಿಕವಾಗಿ ತಿಳಿಸಿಕೊಟ್ಟರು.

ವಿದ್ಯಾರ್ಥಿಗಳಿಂದ ಕಥೆ ಬರೆಸಿ  ಅದರ ಸ್ಕ್ರಿಪ್ಟ್ ಬರೆಯುವುದು, ಸ್ಕ್ರೀನ್ ಪ್ಲೇ ಬರೆಯುವ ವಿಧಾನವನ್ನು ತಿಳಿಸುವುದರ ಜೊತೆಗೆ  ಕ್ಯಾಮರಾ ನಿರ್ವಹಣೆಯ ಬಗ್ಗೆ ವಿವರಿಸಿದರು.



ದೃಶ್ಯ ಸಂಯೋಜನೆಯಲ್ಲಿ ಬೆಳಕಿನ ಪಾತ್ರ ಮತ್ತು ಬೆಳಕು ವಿನ್ಯಾಸದ ಅಗತ್ಯ ಹಾಗೂ ವಿಧಾನವನ್ನು ಪ್ರಾಯೋಗಿಕವಾಗಿ ತಿಳಿಸಿದರು.

ಐದು ದಿನಗಳ ಕಾರ್ಯಗಾರದಲ್ಲಿ ಮೊದಲನೇ ದಿನದಂದು ಸಿನಿಮಾ ತಯಾರಿಕೆಯ ವಿವಿಧ ಹಂತಗಳನ್ನು ಮತ್ತು ಸ್ಕ್ರಿಪ್ಟ್ ಬರವಣಿಗೆಯನ್ನು ವಿವರಿಸುವುದರೊಂದಿಗೆ ಕಥೆಯ ಒಂದು ಎಳೆಯನ್ನು ಅಭಿವೃದ್ಧಿಪಡಿಸುವುದು ಹೇಗೆ ಎಂಬುದನ್ನು ತೋರಿಸಿದರು.

ಕಾರ್ಯಗಾರದ ಎರಡನೇ ದಿನದಲ್ಲಿ ವಿದ್ಯಾರ್ಥಿಗಳಿಂದ ಸ್ವಂತ ಕಥೆಯೊಂದನ್ನು ಬರೆಸಿ ಸಾಫ್ಟ್ವೇರ್ ನಲ್ಲಿ ಸ್ಕ್ರೀನ್ ಪ್ಲೇ ಬರೆಯುವುದನ್ನು ತಿಳಿಸಿಕೊಟ್ಟರು.



ಮೂರನೆಯ ದಿನ ಸೆರೆ ಹಿಡಿಯುವ ವಿಧಾನ, ಬೆಳಕು ವಿನ್ಯಾಸ, ಕ್ಯಾಮೆರಾ ನಿರ್ವಹಣೆ ಮುಂತಾದ ಅಂಶಗಳನ್ನು ತೋರಿದರು.

ಕಾರ್ಯಗಾರದ ನಾಲ್ಕು ಮತ್ತು ಐದನೇ ದಿನಗಳಲ್ಲಿ  ಪೋಸ್ಟ್ ಪ್ರೊಡಕ್ಷನ್ ಕಾರ್ಯಗಳ ಬಗ್ಗೆ ತಿಳಿಸಿ ನಂತರ ವಿದ್ಯಾರ್ಥಿಗಳು ತಯಾರಿಸಿದ ಕಿರು ಚಿತ್ರಗಳನ್ನು ಪ್ರದರ್ಶಿಸಲಾಯಿತು. ಒಂದು ವಾರದ ಕಾರ್ಯಗಾರವು ಉಪಯುಕ್ತ ಮತ್ತು ಪರಿಣಾಮಕಾರಿಯಾಗಿತ್ತು ಎಂದು ವಿದ್ಯಾರ್ಥಿಗಳು ಸಂತಸ ವ್ಯಕ್ತಪಡಿಸಿದರು.



ಸಂಪನ್ಮೂಲ ವ್ಯಕ್ತಿ ನಿರೀಕ್ಷಿತ ಅವರನ್ನು ವಿಭಾಗದ ಮುಖ್ಯಸ್ಥರಾದ ಡಾ. ವೀರಣ್ಣ ಅರ್ಕಸಾಲಿ ಅವರು, ಉಪನ್ಯಾಸಕರು, ವಿದ್ಯಾರ್ಥಿಗಳು ಮತ್ತು ಅಭಿನಂದಿಸಿದರು.